## ಪೊಲೀಸ್ ಗಣೇಶ್!

ಮಂಜು ಸ್ವರಾಜ್ ನಿರ್ದೇಶನದ 'ಪಟಾಕಿ' ಮೇ 26ರಂದು ತೆರೆ ಕಾಣಲಿದೆ. ತೆಲುಗು ಮತ್ತು ಕನ್ನಡ ಭಾಷೆಗಳಲ್ಲಿ ಚಿತ್ರಗಳನ್ನು ತಯಾರಿಸುತ್ತಿರುವ ಎಸ್.ವಿ. ಬಾಬು ನಿರ್ಮಾಣದ ಈ ಚಿತ್ರ ಪ್ರೇಕ್ಷಕರಿಗೆ ಹದಿನಾರಾಣೆ ಮನರಂಜನೆ ನೀಡುತ್ತದೆ ಎನ್ನುವುದು ಚಿತ್ರತಂಡದ ಅನಿಸಿಕೆ.

'ಪಟಾಕಿ' ತೆಲುಗಿನ 'ಪಟಾಸ್' ಚಿತ್ರದ ರೀಮೇಕ್. ಇದು ಹೆಸರಿಗಷ್ಟೇ ರೀಮೇಕ್. ಕನ್ನಡದಲ್ಲಿ ಸಾಕಷ್ಟು ಬದಲಾವಣೆ ಮಾಡಿಕೊಂಡಿದ್ದೇವೆ. ರಂಜನೀಯ ಅಂಶಗಳು ಮೂಲ ಚಿತ್ರಕ್ಕಿಂತಲೂ ಕನ್ನಡದಲ್ಲಿ ಸಾಕಷ್ಟು ಸೊಗಸಾಗಿವೆ ಎಂದು ಮಂಜು ಆತ್ಮವಿಶ್ವಾಸದಿಂದ ಹೇಳುತ್ತಾರೆ.

ಮಂಜು ಸ್ವರಾಜ್ ಸ್ವಮೇಕ್ ಚಿತ್ರಗಳಿಗೆ ಹೆಸರಾದವರು. ಅವರ ಹಿಂದಿನ ಚಿತ್ರಗಳಾದ 'ಶಿಶಿರ', 'ಶ್ರಾವಣಿ ಸುಬ್ರಮಣ್ಯ' ಹಾಗೂ 'ಶ್ರೀಕಂಠ' ತಮ್ಮ ಸದಭಿರುಚಿಯಿಂದ ಹಾಗೂ ವಿಭಿನ್ನ ನಿರೂಪಣೆಯಿಂದ ನೋಡುಗರ ಗಮನಸೆಳೆದಿದ್ದವು. ಈಗ 'ಪಟಾಕಿ' ಮೂಲಕ ಮಂಜು ರೀಮೇಕ್ ಮಾಡಿದ್ದರೂ, ಸ್ವಂತ ಚಿತ್ರವನ್ನು ರೂಪಿಸುವಷ್ಟೇ ಶ್ರದ್ಧೆಯಿಂದ ಇದನ್ನು ರೂಪಿಸಿದ್ದಾರೆ ಎನ್ನಲಾಗುತ್ತಿದೆ. ಮೈಸೂರು, ಬೆಂಗಳೂರಿನ ಜೊತೆಗೆ ವಿದೇಶದ ಸುಂದರ ಹೊರಾಂಗಣದಲ್ಲೂ ಮಂಜು ಚಿತ್ರೀಕರಣ ನಡೆಸಿದ್ದಾರೆ.

ಮೊದಲ ಬಾರಿಗೆ ಪೊಲೀಸ್ ಸಮವಸ್ತ್ರದಲ್ಲಿ ಗಣೇಶ್ ಕಾಣಿಸಿಕೊಂಡಿರುವುದು ಈ ಚಿತ್ರದ ವಿಶೇಷ. ಪೊಲೀಸ್ ಅಧಿಕಾರಿಯಾದರೇನು, ಗಣೇಶ್ ಇದ್ದಮೇಲೆ ವಿನೋದಕ್ಕೆ ಕೊರತೆಯೆಲ್ಲಿ? 'ಪಟಾಕಿ' ರೂಪದಲ್ಲಿ ಗಣೇಶ್ ನಗೆಚಟಾಕಿ ಚಿತ್ರದಲ್ಲಿದೆ. ಗಣೇಶ್ ಜೊತೆಗೆ ರನ್ಯಾ, ಪ್ರಿಯಾಂಕ, ಆಶಿಷ್ ವಿದ್ಯಾರ್ಥಿ, ಸಾಧು ಕೋಕಿಲ, ಧರ್ಮ ಹಾಗೂ ಸಾಯಿಕುಮಾರ್ ತಾರಾಗಣದಲ್ಲಿರುವ ಪ್ರಮುಖರು. ಅರ್ಜುನ್ ಜನ್ಯ ಸಂಗೀತ ಹಾಗೂ ವೆಂಕಟೇಶ್ ಛಾಯಾಗ್ರಹಣ ಚಿತ್ರಕ್ಕಿದೆ.





## ಅರ್ಜುನ್ ಸರ್ಜಾ 150

ಎಚ್.ಡಿ. ಕುಮಾರಸ್ವಾಮಿ ಅವರು ಮುಖ್ಯಮಂತ್ರಿ ಆಗಿದ್ದ ಅವಧಿಯ ಘಟನೆಗಳನ್ನು ಆಧರಿಸಿದ ಕಥೆಯ 'ಭೂಮಿಪುತ್ರ' ಚಿತ್ರದಲ್ಲಿ ಅರ್ಜುನ್ ಸರ್ಜಾ ಮುಖ್ಯಪಾತ್ರದಲ್ಲಿ ನಟಿಸುತ್ತಿದ್ದಾರೆ. ಈ ಚಿತ್ರದ ಮುಹೂರ್ತ ಇತ್ತೀಚೆಗಷ್ಟೇ ಅದ್ದೂರಿಯಾಗಿ ನಡೆದಿದೆ. ಈಗ ಮತ್ತೊಂದು ಸಿನಿಮಾದ ಮೂಲಕ ಅವರು ಸುದ್ದಿಯಲ್ಲಿದ್ದಾರೆ. 'ವಿಸ್ಮಯ' ಹೆಸರಿನ ಇದು ಅವರ ನಟನೆಯ 150ನೇ ಸಿನಿಮಾ!

ಚಿತ್ರೀಕರಣ ಮುಗಿಸಿ ತೆರೆಕಾಣಲು ಸಿದ್ಧವಾಗಿರುವ 'ವಿಸ್ಮಯ' ಕನ್ನಡ ಮತ್ತು ತಮಿಳು ಭಾಷೆಗಳಲ್ಲಿ ರೂಪುಗೊಂಡಿದೆ. ಅರುಣ್ ವೈದ್ಯನಾಥನ್ ಈ ಚಿತ್ರದ ನಿರ್ದೇಶಕರು. ಈ ಮೊದಲು ಮೋಹನ್‌ಲಾಲ್ ಅಭಿನಯದ 'ಪೆರುಚ್ಚಾಳಿ' ಎನ್ನುವ ಯಶಸ್ವಿ ಮಲಯಾಳಂ ಚಿತ್ರವನ್ನು ನಿರ್ದೇಶಿಸಿದ್ದ ಖ್ಯಾತಿ ಅವರದು.

ಬೆಂಗಳೂರಿನ ಆಸುಪಾಸಿನಲ್ಲಿ ಚಿತ್ರದ ಬಹುತೇಕ ಶೂಟಿಂಗ್ ನಡೆದಿದೆ. ಕನ್ನಡದ ನಟಿ ಶ್ರುತಿ ಹರಿಹರನ್ ನಾಯಕಿ ಎನ್ನುವುದು 'ವಿಸ್ಮಯ'ದ ಮತ್ತೊಂದು ವಿಶೇಷ. ಕನ್ನಡತಿ ಸುಧಾರಾಣಿಯೂ ತಾರಾಗಣದಲ್ಲಿದ್ದಾರೆ. ಸುಹಾಸಿನಿ, ಸುಮನ್ ಹಾಗೂ 'ಮಾಣಿಕ್ಯ' ಚಿತ್ರದಲ್ಲಿ ನಟಿಸಿದ್ದ ವರಲಕ್ಷ್ಮಿ ತಾರಾಗಣದಲ್ಲಿರುವ ಪ್ರಮುಖರು. ಕನ್ನಡದ ಮತ್ತೊಬ್ಬ ಪ್ರಸಿದ್ಧ ನಟ ಚಿತ್ರದಲ್ಲಿ ಖಳನ ಪಾತ್ರದಲ್ಲಿ ನಟಿಸಿರುವುದಾಗಿ ಚಿತ್ರತಂಡ ಹೇಳಿಕೊಂಡಿದ್ದು, ಸದ್ಯಕ್ಕೆ ಆ ನಟ ಯಾರೆನ್ನುವ ಗುಟ್ಟನ್ನು ಬಿಟ್ಟುಕೊಟ್ಟಿಲ್ಲ.

ಅರ್ಜುನ್ ಸರ್ಜಾ ಅವರ ಸಿನಿಮಾಗಳು ಸಾಹಸಪ್ರಧಾನ ಕಥನಗಳಿಗೆ ಹೆಸರಾದವು. ವ್ಯವಸ್ಥೆಯ ವಿರುದ್ಧ ಧ್ವನಿಯೆತ್ತುವ ಬಂಡುಕೋರ ನಾಯಕನ ಪಾತ್ರಗಳಿಗೆ ಅರ್ಜುನ್ ಹೆಸರಾದವರು. ಈ ಪಾತ್ರಗಳ ನೆರಳು 'ವಿಸ್ಮಯ'ದಲ್ಲಿ ಕೂಡ ಇರಲಿದೆ. ಅರವಿಂದ್ ಕೃಷ್ಣ ಅವರ ಛಾಯಾಗ್ರಹಣ ಹಾಗೂ ನವೀನ್‌ರ ಸಂಗೀತ ಚಿತ್ರಕ್ಕಿದೆ.

■ ರಘು